ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 23-02-1997.

# *ಜೊತೆಗಾರನನ್ನು ಜೊತೆಯಲ್ಲಿ ಇಟ್ಟುಕೊಂಡು ಸಾಕ್ಷಿ ಹಾಗೂ ಖುಷಿಯ ಸಿಂಹಾಸನ ಅಧಿಕಾರಿಯಾಗಿ.*

(साथी को साथ रख साक्षी और खुशनुमः के तख़्तनशीन बनो)

ಇಂದು ವಿಶ್ವಕಲ್ಯಾಣಕಾರಿ ತಂದೆ ವಿಶ್ವದ ನಾಲ್ಕಾರು ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಎಲ್ಲಾ ಮಕ್ಕಳ ಮುಖದಲ್ಲಿ ಸ್ನೇಹ ಹಾಗೂ ಸಹಯೋಗದ ರೇಖೆಗಳು ಕಾಣಿಸುತ್ತಿದೆ. ಪ್ರತಿಯೊಬ್ಬರ ಹೃದಯದಲ್ಲಿ "ನನ್ನ ಬಾಬಾ" ಈ ಗೀತೆಯನ್ನು ಬಾಪ್‌ದಾದಾರವರು ಕೇಳಿಸಿಕೊಳ್ಳುತ್ತಿದ್ದಾರೆ. ಬಾಪ್‌ದಾದಾರವರು ಸಹ ಪ್ರತ್ಯುತ್ತರವಾಗಿ 'ಓ ನನ್ನ ಅತಿ ಪ್ರಿಯ, ಅತಿ ಮುದ್ದಾದ ಮಕ್ಕಳೇ' ಎಂದು ಹೇಳುತ್ತಿದ್ದಾರೆ. ಪ್ರತಿಯೊಂದು ಮಗು ಪ್ರಿಯ ಹಾಗು ಅತಿ  ಮುದ್ದಾದವರು ಕೂಡಾ ಆಗಿದ್ದಾರೆ. ಏಕೆ?  ಕೋಟಿಯಲ್ಲಿ ಕೆಲವರು ಹಾಗು ಕೆಲವರಲ್ಲಿಯೂ ಕೆಲವರು ಆಗಿದ್ದೀರಿ. ಅಂದಮೇಲೆ ಮುದ್ದಾದ ಮಕ್ಕಳಾದಿರಲ್ಲವೇ? ಆದ್ದರಿಂದ ಬಾಪ್‌ದಾದಾ ಸಹ ಮುದ್ದಿನ ಮಕ್ಕಳನ್ನು ನೋಡಿ ಖುಷಿಯಾಗುತ್ತಿದ್ದಾರೆ. ಮಕ್ಕಳು ಸದಾ ಖುಷಿಯಲ್ಲಿ ಡಾನ್ಸ್ ಮಾಡುತ್ತಿರುವುದನ್ನು ನೋಡುತ್ತಾರೆ ಹಾಗೂ ಸದಾ ನೋಡಲು ಬಯಸುತ್ತಾರೆ. ಖುಷಿಯಲ್ಲಂತೂ ಇರುತ್ತೀರಿ ಆದರೆ ಬಾಬಾರವರು ಸದಾ ಖುಷಿಯಲ್ಲಿ ನೋಡಲು ಬಯಸುತ್ತಾರೆ. ಸದಾ ಖುಷಿಯಾಗಿರುತ್ತೀರಾ ಅಥವಾ ಖುಷಿಯಲ್ಲಿ ಅಂತರ ಬರುತ್ತದೆಯೇ? ಕೆಲವೊಮ್ಮೆ ಬಹಳ ಖುಷಿ. ಕೆಲವೊಮ್ಮೆ ಸ್ವಲ್ಪ ಕಡಿಮೆ ಹಾಗು ಕೆಲವೊಮ್ಮೆ ಬಹಳ ಕಡಿಮೆ ಖುಷಿಯಾಗಿ ಇದ್ದೀರಾ?

ಬಾಬಾರವರು ಮೊದಲು ಸಹ ಹೇಳಿದರು. ವರ್ತಮಾನ ಸಮಯ ವಿಶ್ವಕ್ಕೆ ಮಕ್ಕಳಾದ ನಿಮ್ಮ ಈ ಸೇವೆಯ ಅವಶ್ಯಕತೆ ಇದೆ- ನಿಮ್ಮ ಮುಖದಿಂದ, ನಯನಗಳಿಂದ, ನಿಮ್ಮ ಎರಡು ಮಾತುಗಳಿಂದ ಪ್ರತಿಯೊಂದು ಆತ್ಮನ ದುಃಖವನ್ನು ದೂರ ಮಾಡಿ ಖುಷಿಯನ್ನು ಕೊಟ್ಟುಬಿಡಿ. ನಿಮ್ಮನ್ನು ನೋಡುತ್ತಲೇ ಖುಷಿಯಾಗಬೇಕು ಆದ್ದರಿಂದ ಸದಾ ಖುಷಿಯಾದ ಚಹರೆ(ಮುಖ) ಅಥವಾ ಸಂತೋಷದ ಮೂರ್ತಿ ಆಗಿರಿ ಏಕೆಂದರೆ ಮನಸ್ಸಿನ ಖುಷಿ ಮುಖದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಯಾರೇ ಎಷ್ಟೇ ಅಲೆದಾಡುತ್ತಾ ಇರುವಂತಹ, ತೊಂದರೆಯಲ್ಲಿ ಇರುವಂತಹ, ದುಃಖದ ಅಲೆಯಲ್ಲಿ ಇರುವಂತಹವರು ಖುಷಿಯಾಗಿರುವುದು ಅಸಂಭವ ಎಂದುಕೊಳ್ಳುವವರಾದರೂ ನಿಮ್ಮ ಮುಂದೆ ಬರುತ್ತಲೇ ನಿಮ್ಮ ಮೂರ್ತಿ, ನಿಮ್ಮ ವೃತಿ, ನಿಮ್ಮ ದೃಷ್ಟಿ ಆತ್ಮನನ್ನು ಪರಿವರ್ತನೆ ಮಾಡಿಬಿಡಬೇಕು. ಇಂದು ಮನಸ್ಸಿನ ಖುಷಿಗಾಗಿ ಎಷ್ಟೊಂದು ಖರ್ಚು ಮಾಡುತ್ತಾರೆ, ಎಷ್ಟೊಂದು ಮನೊರಂಜನೆಯ ಹೊಸ ಹೊಸ ಸಾಧನಗಳನ್ನು ಮಾಡುತ್ತಾರೆ. ಅದಾಗಿದೆ ಅಲ್ಪ ಕಾಲದ ಸಾಧನೆ ಹಾಗು ನಿಮ್ಮದು ಸದಾ ಕಾಲದ ಸತ್ಯ ಸಾಧನೆ. ಅಂದಮೇಲೆ ಸಾಧನೆ ಆ ಅತ್ಮರನ್ನು ಪರಿವರ್ತನೆ ಮಾಡಿಬಿಡಲಿ. ಅಯ್ಯೋ ಎಂದು ಬರಲಿ ಮತ್ತು ವಾಹ್ ವಾಹ್ ಎನ್ನುತ್ತಾ ಹೋಗಲಿ, ವಾಹ್ ಅದ್ಭುತವಾಗಿದೆ ಪರಮಾತ್ಮನ ಆತ್ಮರದ್ದು. ಹಾಗಾದರೆ ಈ

ಸೇವೆಯನ್ನು ಮಾಡಿ. ಸಮಯ ಪ್ರತಿ ಸಮಯ ಎಷ್ಟು ಅಲ್ಪ ಕಾಲದ ಸಾಧನಗಳಿಂದ ಚಿಂತಿತರಾಗುತ್ತಾ ಹೋಗುತ್ತಾರೆ. ಅಂತಹ ಸಮಯದಲ್ಲಿ ನಿಮ್ಮ ಖುಷಿ ಅವರಿಗೆ ಆಸರೆಯಾಗಲಿ, ಏಕೆಂದರೆ, ನೀವಂತೂ ಖುಷಿಯ ಅದೃಷ್ಟವಂತರು. ಅದೃಷ್ಟಶಾಲಿಗಳಾಗಿದ್ದೀರಲ್ಲವೇ? ಅರ್ಧದಲ್ಲಿ ಇಲ್ಲ ತಾನೆ? ನೀವಂತು ಖುಷಿಯ ಅದೃಷ್ಟಶಾಲಿಗಳಾಗಿದ್ದೀರಿ. ನಿಮ್ಮಷ್ಟು ಖುಷಿಯ ಅದೃಷ್ಟಶಾಲಿಗಳು ಇಡೀ ಕಲ್ಪದಲ್ಲಿ ಯಾವುದೇ ಆತ್ಮನಿಲ್ಲ. ಇಷ್ಟು ನಶೆ ಚಹರೆ ಹಾಗೂ ಚಲನೆಯಲ್ಲಿ ಅನುಭವ ಮಾಡಿಸಿರಿ. ಮಾಡಿಸಬಹುದೇ ಅಥವಾ ಮಾಡಿಸುತ್ತೀರೋ?

ಬ್ರಾಹ್ಮಣ ಜೀವನದಲ್ಲಿ ಒಂದು ವೇಳೆ ಖುಷಿ ಇಲ್ಲ ಎಂದರೆ ಬ್ರಾಹ್ಮಣರಾಗಿ ಏನು ಮಾಡಿದಿರಿ! ಬ್ರಾಹ್ಮಣ ಜೀವನ ಅರ್ಥಾತ್ ಖುಷಿಯ ಜೀವನ. ಕೆಲವೊಮ್ಮೆ ಬಾಪ್‍ದಾದರವರು ನೋಡುತ್ತಾರೆ. ಕೆಲವು ಮಕ್ಕಳ ಚಹರೆಯಲ್ಲಿ ಏನಿರುತ್ತದೆ ಎಂದರೆ. ನೀವೆಲ್ಲರೂ ತಿಳಿದುಕೊಂಡಿದ್ದೀರಿ ಹಾಗಾಗಿಯೇ ನಗುತ್ತಿದ್ದೀರಿ. ಬಾಪ್‍ದಾದಾರವರಿಗೆ ಇಂತಹ ಚಹರೆಯನ್ನು ನೋಡಿ ದಯೆ ಬರುತ್ತದೆ ಹಾಗೂ ಸ್ವಲ್ಪ ಆಶ್ಚರ್ಯವೂ ಆಗುತ್ತದೆ. ನನ್ನ ಮಕ್ಕಳು ಹಾಗೂ ಉದಾಸ! ಈ ರೀತಿ ಆಗಲು ಸಾಧ್ಯವೇ? ಇಲ್ಲ ಅಲ್ಲವೇ! ಉದಾಸ ಅರ್ಥಾತ್ ಮಾಯೆಯ ದಾಸ. ಆದರೆ ನೀವಂತೂ ಮಾಸ್ಟರ್ ಮಾಯಾಪತಿ ಆಗಿದ್ದೀರಿ. ಮಾಯೆ ನಿಮ್ಮ ಮುಂದೆ ಏನಾಗಿದೆ? ಇರುವೆಯೂ ಅಲ್ಲ, ಸತ್ತು ಹೋಗಿರುವ ಇರುವೆ. ದೂರದಿಂದ ಜೀವಂತ ಇರುವಂತೆ ಅನಿಸುತ್ತದೆ ಆದರೆ ಅದು ಸತ್ತು ಹೋಗಿರುತ್ತದೆ. ಕೇವಲ ದೂರದಿಂದ ಪರಿಶೀಲನೆ ಮಾಡುವ ಶಕ್ತಿ ಬೇಕಾಗಿದೆ. ಹೇಗೆ ತಂದೆಯ ಜ್ಞಾನ ವಿಸ್ತಾರದಿಂದ ತಿಳಿದುಕೊಂಡ್ಡಿದ್ದೀರಲ್ಲವೇ. ಇದೇ ರೀತಿ ಮಾಯೆಯ ಬಹುರೂಪಗಳನ್ನು ಪರಿಶೀಲಿಸುವ, ಜ್ಞಾನವನ್ನು ಚೆನ್ನಾಗಿ ಧಾರಣೆ ಮಾಡಿಕೊಳ್ಳಿರಿ. ಅದು ಕೇವಲ ನಿಮ್ಮನ್ನು ಹೆದರಿಸುತ್ತದೆ. ಹೇಗೆ ಚಿಕ್ಕ ಮಕ್ಕಳಿಗೆ ತಂದೆ ತಾಯಿ ಅವರನ್ನು ನಿರ್ಭಯರನ್ನಾಗಿ ಮಾಡುವುದಕ್ಕಾಗಿ ಹೆದರಿಸುತ್ತಾರೆ. ಏನು ಮಾಡುವುದಿಲ್ಲ, ಉದ್ದೇಶಪೂರ್ವಕವಾಗಿ ಹೆದರಿಸುತ್ತಾರೆ. ಇದೇ ರೀತಿ ಮಾಯೆಯು ಸಹ ತನ್ನವರನ್ನಾಗಿ ಮಾಡಿಕೊಳ್ಳಲು ಬಹುರೂಪವನ್ನು ಧಾರಣೆ ಮಾಡಿಕೊಳ್ಳುತ್ತದೆ. ಯಾವಾಗ ಅದು ಬಹುರೂಪವನ್ನು ಧಾರಣೆ ಮಾಡಿಕೊಳ್ಳುತ್ತದೆಯೋ ಆಗ ನೀವು ಸಹ ಬಹುರೂಪಿಯಾಗಿ ಅದನ್ನು ಪರಿಶೀಲಿಸಿರಿ. ಒಂದುವೇಳೆ ಪರಿಶೀಲಿಸದಿದ್ದರೆ ಯಾವ ಆಟವನ್ನು ಆಡುತ್ತೀರಿ? ಯುದ್ಧ ಮಾಡಲು ಶುರು ಮಾಡಿಬಿಡುತ್ತೀರಿ, ಅಯ್ಯೋ ಮಾಯೆ ಬಂದುಬಿಟ್ಟಿತು...! ಹಾಗೂ ಯುದ್ಧ ಮಾಡುವುದರಿಂದ ಬುದ್ಧಿ, ಮನಸ್ಸು ದಣಿಯುತ್ತದೆ. ದಣಿದ ನಂತರ ಏನು ಹೇಳುತ್ತೀರಿ? ಮಾಯೆ ಬಹಳ ಪ್ರಭಲವಾಗಿದೆ. ಮಾಯೆ ಬಹಳ ತೀಕ್ಷ್ಣವಾಗಿದೆ ಎಂದು ಆದರೆ ಏನೂ ಇಲ್ಲ. ನಿಮ್ಮ ಬಲಹೀನತೆಯೇ ಮಾಯೆಯ ಭಿನ್ನ-ಭಿನ್ನ ರೂಪವಾಗಿ ಬಿಡುತ್ತದೆ. ಬಾಪ್‍ದಾದಾರವರು ಸದಾ ಪ್ರತಿಯೊಂದು ಮಗುವನ್ನೂ ಖುಷಿಯ ಅದೃಷ್ಟದ ನಶೆಯಲ್ಲಿ, ಖುಷಿಯ ಮುಖ ಹಾಗೂ ಖುಷಿಯ ಆಹಾರವನ್ನು ತಿಂದು ಆರೋಗ್ಯವಂತರೂ ಹಾಗೂ ಸದಾ ಖುಷಿಯ ಖಜಾನೆಗಳಿಂದ ಸಂಪನ್ನರನ್ನಾಗಿ ನೋಡಲು ಬಯಸುತ್ತಾರೆ. ಜೀವನದಲ್ಲಿ ಇನ್ನೇನು ಬೇಕು? ಆಹಾರ ಹಾಗೂ ಖಜಾನೆ. ಮತ್ತಿನ್ನೇನು ಬೇಕು? ಎಂದ ಮೇಲೆ ನಿಮ್ಮ ಬಳಿ ಖುಷಿಯ ಆಹಾರ ಇದೆಯೇ ಅಥವಾ ಕೆಲವೊಮ್ಮೆ ಸ್ಟಾಕ್ ಖಾಲಿ ಆಗಿ ಹೋಗುತ್ತದೆಯೇ? ಖುಷಿಯ ಖಜಾನೆ ಸಂಪನ್ನವಾಗಿದೆ. ಸಂಪನ್ನವಾಗಿದೆಯೇ? ಎಷ್ಟು ಖರ್ಚಾಗುತ್ತದೆಯೋ ಅಷ್ಟು ವೃದ್ಧಿ ಆಗುತ್ತದೆ. ಒಂದುವೇಳೆ. ಬೇರೆ ಯಾವ ಪುರುಷಾರ್ಥ ಮಾಡದಿದ್ದರೂ ಸಹ ಕೇವಲ ಒಂದು ಲಕ್ಷ್ಯವನ್ನು ಇಟ್ಟುಕೊಳ್ಳಿ- ಏನೇ ಆಗಲಿ, ತಮ್ಮ ಮನಸ್ಸಿನ ಸ್ಥಿತಿಯ ಮೂಲಕ, ಅಥವಾ ಯಾವುದೇ ಅನ್ಯ ಆತ್ಮರ

ಮೂಲಕ, ಅಥವಾ ಪ್ರಕೃತಿಯ ಮೂಲಕ. ಅಥವಾ ವಾಯುಮಂಡಲದ ಮೂಲಕ, ಏನೇ ಆದರೂ ಸಹ ನಾನು ಖುಷಿಯನ್ನು ಕಳೆದುಕೊಳ್ಳಬಾರದು. ಇದಂತೂ ಸಹಜ ಪುರುಷಾರ್ಥವಾಗಿದೆ ಅಲ್ಲವೇ ಅಥವಾ ಖುಷಿ ಜಾರಿ ಹೋಗುತ್ತದೆಯೇ? ಸಹಜವಾಗಿದೆಯೇ ಅಥವಾ ಕೆಲವೊಮ್ಮೆ ಕಠಿಣ ಎನಿಸುತ್ತದೆಯೋ? ದೃಢ ಸಂಕಲ್ಪವನ್ನಿಡಿ ಹಾಗೂ ವಿಷಯಗಳನ್ನು ಮರೆತು ಹೋಗಿ. ಒಂದೇ ಮಾತನ್ನು ಪಕ್ಕಾ ಮಾಡಿಕೊಳ್ಳಿ- ನಾನು ಖುಷಿಯಾಗಿ ಇರಬೇಕು. ಆಗ ವಿಷಯಗಳು ಹೇಗೆ ಅನುಭವವಾಗುತ್ತದೆ? ಆಟದ ಸಮಾನ, ಹಾಗೂ ತಮ್ಮ ಆಟವನ್ನು ನೋಡುವ ಸಾಕ್ಷಿ ತನದ ಸೀಟಿನ ಮೇಲೆ ಸದಾ ಸ್ಥಿತರಾಗಿರಿ. ಯಾರೇ ನಿಮ್ಮ ಅಪಮಾನ ಮಾಡುವವರಾಗಿರಲಿ, ನಿಮಗೆ ತೊಂದರೆ ಕೊಡುವವರಾಗಿರಲಿ, ನಿಮ್ಮ ಸಾಕ್ಷಿ ತನದ ಸ್ಥಿತಿಯಿಂದ ಕೆಳಗೆ ಇಳಿಸುವವರಾಗಿರಲಿ ಆದರೆ ನೀವು ಸಾಕ್ಷಿತನದ ಸೀಟಿನಿಂದ ಕೆಳಗೆ ಬರಬೇಡಿ. ಕೆಳಗೆ ಬಂದುಬಿಟ್ಟಾಗಲೇ ಖುಷಿ ಕಡಿಮೆಯಾಗಿ ಹೋಗುತ್ತದೆ.

ಬಾಪ್‌ದಾದಾರವರು ಮೊದಲು ಸಹ ಎರಡು ಶಬ್ದಗಳನ್ನು ಹೇಳಿದ್ದರು- ಜೊತೆಗಾರ ಹಾಗೂ ಸಾಕ್ಷಿ. ಯಾವಾಗ ಬಾಪ್‌ದಾದಾರವರು ಜೊತೆಯಲ್ಲಿದ್ದಾರೆಯೋ ಆಗ ಸಾಕ್ಷಿತನದ ಸೀಟ್ ಸದಾ ಬಲಶಾಲಿಯಾಗಿರುತ್ತದೆ. ಎಲ್ಲರೂ ಹೇಳುತ್ತಾರೆ ಬಾಪ್‌ದಾದಾರವರು ಜೊತೆಯಲ್ಲಿದ್ದಾರೆ. ಬಾಪ್ ದಾದಾರವರು ಜೊತೆಯಲ್ಲಿ ಇದ್ದಾರೆ ಎಂದು ಆದರೆ ಮಾಯೆಯ ಪ್ರಭಾವವು ಬೀಳುತ್ತಿದೆ ಎಂದು ಹೇಳುತ್ತೀರಿ. ಬಾಪ್‌ದಾದಾರವರು ಜೊತೆಯಲ್ಲಿದ್ದಾರೆ, ಆದರೆ ತಂದೆಯ ಜೊತೆಯನ್ನು ಆ ಸಮಯದಲ್ಲಿ ಉಪಯೋಗ ಮಾಡುವುದಿಲ್ಲ, ಬದಿಗೆ ಸರಿಸಿ ಬಿಡುತ್ತಿರಿ. ಹೇಗೆ ಯಾರಾದರೂ ಜೊತೆಯಲ್ಲಿದ್ದಾಗ ಬಹಳಷ್ಟು ಕೆಲಸಗಳು ಬಂದು ಬಿಟ್ಟರೆ ಅಥವಾ ಕೆಲವು ವಿಷಯಗಳಲ್ಲಿ ಜೊತೆಯಲ್ಲಿರುವವರ ಯೋಚನೆಯೂ ಬರುವುದಿಲ್ಲ. ಅಷ್ಟು ವಿಷಯಗಳಲ್ಲಿ ವ್ಯಸ್ತರಾಗಿಬಿಡುತ್ತಾರೆ, ಮುಳುಗಿಹೋಗುತ್ತಾರೆ. ಹಾಗೆಯೇ ಬಾಬಾ ಜೊತೆ ಇದ್ದಾರೆ ಎಂದು ಅಂಗೀಕರಿಸುತ್ತಿದ್ದೀರಿ. ಅನುಭವ ಕೂಡ ಮಾಡಿಕೊಳ್ಳುತ್ತಿದ್ದೀರಿ. ಯಾರಾದರೂ ನನ್ನ ಜೊತೆ ಇಲ್ಲ ಎಂದು ಹೇಳುವವರು ಇದ್ದೀರಾ? ಯಾರು ಹೇಳುವುದಿಲ್ಲ. ಪ್ರತಿಯೊಬ್ಬರೂ ನನ್ನ ಜೊತೆ ಇದ್ದಾರೆ ಎನ್ನುತ್ತೀರಿ . ನಿನ್ನ ಜೊತೆ ಎಂದು ಯಾರೂ ಹೇಳುವುದಿಲ್ಲ. ಪ್ರತಿಯೊಬ್ಬರೂ ನನ್ನ ಜೊತೆ ಎನ್ನುತ್ತಿದ್ದೀರಿ. ಮನಸ್ಸಿನಿಂದ ಹೇಳುತ್ತಿದ್ದೀರಾ ಅಥವಾ ಬಾಯಿಂದ ಹೇಳುತ್ತಿದ್ದೀರಾ? ಮನಸ್ಸಿನಿಂದಲೇ ಹೇಳುತ್ತಿದ್ದೀರಾ?

ಬಾಪ್‌ದಾದಾ ಆಟವನ್ನು ನೋಡುತ್ತಿದ್ದಾರೆ. ತಂದೆ ಜೊತೆಯಲ್ಲಿ ಕುಳಿತಿದ್ದರೂ ಸಹ ತಮ್ಮ ಪರಿಸ್ಥಿತಿಯಲ್ಲಿ, ಅದನ್ನು ಎದುರಿಸುವುದರಲ್ಲಿ ಎಷ್ಟು ಮಗ್ನರಾಗಿ ಹೋಗುತ್ತೀರೆಂದರೆ ಜೊತೆಯಲ್ಲಿ ಯಾರು ಇದ್ದಾರೆ ಎನ್ನುವುದನ್ನು ಸಹ ನೋಡುವುದಿಲ್ಲ. ಆಗ ತಂದೆಯು ಏನು ಮಾಡುತ್ತಾರೆ? ತಂದೆಯು ಸಹ ಜೊತೆಗಾರನಿಂದ ಸಾಕ್ಷಿಯಾಗಿ ಆಟವನ್ನು ನೋಡುತ್ತಾರೆ. ಹೀಗೆ ಮಾಡಬೇಡಿರಿ. ಜೊತೆಗಾರ ಎಂದು ತಿಳಿದಮೇಲೆ ಜೊತೆಯಂತೂ ನಿಭಾಯಿಸಿರಿ. ಏಕೆ ಬದಿಗೆ ಸರಿಸುತ್ತೀರಿ? ತಂದೆಗೆ ಇದು ಇಷ್ಟವಾಗುವುದಿಲ್ಲ. ತಂದೆ ಇದೇ ಶುಭ ಆಸೆಯನ್ನು ಇಟ್ಟುಕೊಳ್ಳುತ್ತಾರೆ ಮತ್ತು ಒಂದೊಂದು ಮಗು ಸಹ ಸ್ವರಾಜ್ಯ ಅಧಿಕಾರಿ ಸೋ ವಿಶ್ವರಾಜ್ಯಾಧಿಕಾರಿ ಆಗಿದ್ದಾರೆ. ನೀವು ಪ್ರಜೆಯಾಗಿದ್ದೀರಾ? ಪ್ರಜೆಯಂತು ಆಗುವ ಹಾಗಿಲ್ಲ ಅಲ್ಲವೇ? ರಾಜರಾಗಿದ್ದೀರಿ. 'ಮಹಾರಾಜರಾಗಿದ್ದೀರಿ, ವಿಶ್ವ ರಾಜರಾಗಿದ್ದೀರಿ ಅಲ್ಲವೇ! ಪ್ರಜೆಗಳನ್ನು ತಯಾರು ಮಾಡುವವರಾಗಿದ್ದೀರಿ, ಪ್ರಜೆಗಳಲ್ಲ ತಾನೇ! ರಾಜರಾಗುತ್ತೀರಾ? ಅಥವಾ ಪ್ರಜೆಯಾಗುತ್ತೀರಾ? ರಾಜನು ಎಲ್ಲಿ

ಕೂಳಿತುಕೊಳ್ಳುತ್ತಾನೆ? ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನಲ್ಲವೇ? ಪ್ರತ್ಯಕ್ಷವಾಗಿ ರಾಜನ ಖುಷಿಯಲ್ಲಿ ಇದ್ದರೆ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತೀರಲ್ಲವೇ? ಸಾಕ್ಷಿ ಸ್ಥಿತಿಯ ಸಿಂಹಾಸನವನ್ನು ಎಂದೂ ಬಿಡಬೇಡಿರಿ. ಬೇರೆ ಬೇರೆ ಪುರುಷಾರ್ಥ ಮಾಡುತ್ತೀರಿ ಅದರಲ್ಲಿ ಸುಸ್ತಾಗಿ ಬಿಡುತ್ತೀರಿ. ಇಂದು ಮನಸ್ಸಿನಿಂದ ಮಾಡಿದೆ, ನಾಳೆ ವಾಚಾದಿಂದ ಮಾಡಿದೆ. ಸಂಬಂಧ ಸಂಪರ್ಕದಿಂದ ಪುರುಷಾರ್ಥ ಮಾಡಿದೆ ಎಂದರೆ ಸುಸ್ತಾಗಿ ಅಡುತ್ತೀರಿ. ಒಂದೇ ಪುರುಷಾರ್ಥ ಮಾಡಿ- ಸಾಕ್ಷಿ ಹಾಗೂ ಹರ್ಷಿತ ಮುಖವಾಗಿ ಸಿಂಹಾಸನಾಧಿಕಾರಿಯಾಗಿರಬೇಕು. ಈ ಸಿಂಹಾಸನವನ್ನು ಎಂದೂ ಸಹ ಬಿಡಬೇಡಿ, ಯಾರಾದರೂ ರಾಜ ಗಂಭೀರವಾಗಿ ಸಿಂಹಾಸನದ ಮೇಲೆ ಕುಳಿತುಕೊಂಡು, ಬಹಳ ಕ್ರೋಧಿತವಾಗಿ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದರೆ, ಅಫಿಶಿಯಲ್‌ಆಗಿ (ಅಧಿಕೃತವಾಗಿ) ಕುಳಿತುಕೊಂಡರೆ ಚೆನ್ನಾಗಿರುತ್ತದೆಯೇ? ಇವರಂತೂ ರಾಜರಲ್ಲ ಎಂದು ಹೇಳುತ್ತಾರೆ. ಅಂದಮೇಲೆ ನೀವು ಸದಾ ಸಿಂಹಾಸನಾಧಿಕಾರಿಗಳಾಗಿದ್ದೀರಲ್ಲವೇ! ಆ ರಾಜರಂತೂ ಕೆಲವೊಮ್ಮೆ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ. ಕೆಲವೊಮ್ಮೆ ಕುಳಿತುಕೊಳ್ಳುವುದಿಲ್ಲ ಆದರೆ ಸಾಕ್ಷಿತನದ ಸಿಂಹಾಸನ ಎಂತಹ ಸಿಂಹಾಸನವಾಗಿದೆ ಎಂದರೆ ಪ್ರತಿ ಕಾರ್ಯ ಮಾಡುತ್ತಿದ್ದರೂ ಸಹ ಅದರ ಮೇಲೆ ಕುಳಿತುಕೊಳ್ಳುವ ಸಿಂಹಾಸನಾಧಿಕಾರಿಗಳಾಗಿ ಇರಬಹುದು, ಇಳಿಯಬೇಕಾಗಿಲ್ಲ. ಮಲಗುತ್ತಲೂ ಸಿಂಹಾಸನಾಧೀಶರು, ಏಳುತ್ತಾ- ನಡೆದಾಡುತ್ತಾ, ಸಂಬಂಧ-ಸಂಪರ್ಕದಲ್ಲಿ ಬರುತ್ತಾ ಸಿಂಹಾಸನಧಿಕಾರಿಗಳು. ಸಿಂಹಾಸನದ ಮೇಲೆ ಕುಳಿತುಕೊಳ್ಳುವುದು ಬರುತ್ತದೆ ಅಲ್ಲವೇ, ಅಥವಾ ಬರುವುದಿಲ್ಲವೋ ಜಾರಿ ಹೋಗುತ್ತದೆಯೇ? ಸಾಕ್ಷಿತನದ ಸಿಂಹಾಸನಾಧಿಕಾರಿ ಅತ್ಮ ಎಂದೂ ಸಹ ಯಾವುದೇ ಸಮಸ್ಯೆಯಲ್ಲಿ, ತೊಂದರೆಯಲ್ಲಿ ಬರಲು ಸಾಧ್ಯವಿಲ್ಲ. ಸಮಸ್ಯೆ ಸಿಂಹಾಸನದ ಕೆಳಗೆ ಉಳಿದುಕೊಂಡು ಬಿಡುತ್ತದೆ ಹಾಗೂ ನೀವು ಸಿಂಹಾಸನದ ಮೇಲೆ ಇರುತ್ತೀರಿ. ಸಮಸ್ಯೆ ನಿಮ್ಮ ಮುಂದೆ ತಲೆ ಎತ್ತಲು ಸಾಧ್ಯವಿಲ್ಲ. ಕೆಳಗೆ ದಮನವಾಗಿ ಉಳಿಯುತ್ತದೆ. ನಿಮಗೆ ತೊಂದರೆ ಕೊಡುವುದಿಲ್ಲ ಹಾಗೂ ಯಾರನ್ನೇ ದಮನ ಮಾಡುತ್ತಾ ಇದ್ದರೆ (ಒತ್ತಡದಲ್ಲಿಟ್ಟರೆ) ಒಳಗಡೆಯೇ ಸಮಾಪ್ತಿಯಾಗಿ ಬಿಡುತ್ತಾರೆ. ಬಾಪ್‌ದಾದಾರವರಿಗೆ ಇಂತಹ ಸಮಯದಲ್ಲಿ ಆಶ್ಚರ್ಯ ಎನಿಸುತ್ತದೆ. ನೀವು ಆಶ್ಚರ್ಯ ಪಡಬೇಡಿ. ತಮ್ಮ ಮೇಲೆ ಭಲೇ ಆಶ್ಚರ್ಯ ಪಡಿ ಆದರೆ ಅನ್ಯರ ಮೇಲೆ ಅಲ್ಲ. ಆಶ್ಚರ್ಯವಾಗುತ್ತದೆ ನನ್ನ ಮಕ್ಕಳು ಇದೇನು ಮಾಡುತ್ತಿದ್ದಾರೆ! ಸಿಂಹಾಸನದ ಮೇಲಿಂದ ಕೆಳಗಿಳಿಯುತ್ತಿದ್ದಾರೆ ಎಂದು. ಸಿಂಹಾಸನಾಧಿಕಾರಿಯಾಗಿ ಇರುವಂತ ಸಂಸ್ಕಾರ ಈಗಿನಿಂದಲೇ ಹಾಕಿಕೊಂಡರೆ ಆಗ ವಿಶ್ವದ ಸಿಂಹಾಸನದ ಮೇಲೂ ಸಹ ಕುಳಿತುಕೊಳ್ಳುವಿರಿ. ಒಂದುವೇಳೆ ಇಲ್ಲ ಸದಾ ಕಾಲಕ್ಕಾಗಿ ಸಿಂಹಾಸನಾಧಿಕಾರಿಯಾಗಿ ಇಲ್ಲದಿದ್ದರೆ ಅಲ್ಲಿಯೂ ಸಹ ಸದಾ ಅರ್ಥಾತ್ ಎಷ್ಟು ಸಮಯ ಸಂಪೂರ್ಣವಾಗಿ ಇಲ್ಲವೋ ಅಷ್ಟು ಸಮಯ ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲಾ ಸಂಸ್ಕಾರವನ್ನು ಈಗಲೇ ತುಂಬಿಕೊಳ್ಳಬೇಕು. ನಂತರ ಇಲ್ಲಿ ತುಂಬಿಕೊಂಡಿರುವ ಸಂಸ್ಕಾರಗಳೇ ಸತ್ಯಯುಗದಲ್ಲಿ ಕಾರ್ಯ ಮಾಡುವವು. ರಾಯಲ್ಟಿಯ ಸಂಸ್ಕಾರ ಈಗಿನಿಂದಲೇ ತುಂಬಿ ಕೊಳ್ಳಬೇಕು. ಹೀಗೆ ತಿಳಿಯಬೇಡಿ- ಇನ್ನೂ ಸ್ವಲ್ಪ ಸಮಯ ಉಳಿದಿದೆ. ಇಷ್ಟರಲ್ಲಂತೂ ವಿನಾಶ ಆಗುವುದಿಲ್ಲ. ಹೀಗೆ ಯೋಚಿಸಬೇಡಿ. ವಿನಾಶ ಇದ್ದಕ್ಕಿದ್ದಂತೆ ಆಗಬೇಕು. ನಿಮ್ಮನ್ನು ತಯಾರಾಗಿದ್ದೀರಾ ಎಂದು ಕೇಳಿ ಆಗುವುದಿಲ್ಲ! ಎಲ್ಲವೂ ಇದ್ದಕ್ಕಿದ್ದಂತೆ ಆಗಬೇಕು. ನೀವು ಸಹ ಹೇಗೆ ಬ್ರಾಹ್ಮಣರಾದಿರಿ? ಇದ್ದಕ್ಕಿದ್ದಂತೆ ಸಂದೇಶ ಸಿಕ್ಕಿತು. ಪ್ರದರ್ಶನ ನೋಡಿದಿರಿ. ಸಂಪರ್ಕ ಸಂಬಂಧದಲ್ಲಿ ಬಂದಿರಿ ಹಾಗೂ ಬದಲಾಗಿ ಬಿಟ್ಟಿರಿ. ಇಂತಹ ತಾರೀಖಿನಂದು ಬ್ರಾಹ್ಮಣರಾಗೋಣ ಎಂದು ಯೋಚಿಸಿದ್ದೀರೇ? ಇದ್ದಕ್ಕಿದ್ದಂತೆ ಆಯಿತಲ್ಲವೇ! ಅಂದಮೇಲೆ

ಪರಿವರ್ತನೆಯೂ ಸಹ ಇದ್ದಕ್ಕಿದ್ದಂತೆಯೇ ಆಗಬೇಕು. ನಿಮ್ಮನ್ನು ಮೊದಲು ಮಾಯೆ ಇನ್ನಷ್ಟು ಸೋಮಾರಿತನದಲ್ಲಿ ತರುವುದು. ಯೋಚಿಸುವಿರಿ ನಾವಂತೂ 2000 ಎಂದುಕೊಂಡಿದ್ದೆವು ಈಗ ಅದು ಸಹ ಪೂರ್ತಿ ಆಯಿತು. ಈಗಲಾದರೂ ಸ್ವಲ್ಪ ವಿಶ್ರಾಂತಿ ಮಾಡೋಣ. ಮಾಯೆ ಮೊದಲು ತನ್ನ ಜಾದುವನ್ನು ಹರಡುತ್ತದೆ. ಸೋಮಾರಿತನದಲ್ಲಿ ತರುತ್ತದೆ. ಯಾವುದೇ ಮಾತಿನಲ್ಲಿ, ಸೇವೆಯಾಗಲಿ, ಯೋಗದಲ್ಲಾಗಲಿ ಧಾರಣೆಯಲ್ಲಾಗಲಿ, ಸಂಬಂಧ ಸಂಪರ್ಕದಲ್ಲಾಗಲಿ ಇದಂತೂ ನಡೆಯುತ್ತದೆ. ಈಗಂತೂ ನಡೆಯುತ್ತಲೇ ಬಂದಿದೆ.... ಈ ರೀತಿ ಮೊದಲು ಮಾಯೆ ಸೋಮಾರಿತನದಲ್ಲಿ ತರುವ ಪ್ರಯತ್ನ ಮಾಡುತ್ತದೆ. ನಂತರ ಇದ್ದಕ್ಕಿದ್ದಂತೆ ವಿನಾಶವಾಗುತ್ತದೆ. ನಂತರ ಈ ರೀತಿಯೂ ಆಗುತ್ತದೆ ಎಂದು ಬಾಪ್‌ದಾದಾ ನಮಗೆ ಈ ಮಾತನ್ನು ಹೇಳಲೇ ಇಲ್ಲ ಎಂದು ಹೇಳಬೇಡಿರಿ. ಹಾಗಾಗಿ ಮೊದಲೇ ಹೇಳುತ್ತಿದ್ದಾರೆ- ಯಾವುದೇ ವಿಷಯದಲ್ಲಿ ಎಂದೂ ಸಹ ಸೋಮಾರಿತನವನ್ನು ತೋರಿಸಬೇಡಿ. ನಾಲ್ಕು ಸಬ್ಜೆಕ್ಟ್ ನಲ್ಲಿ (ವಿಷಯಗಳಲ್ಲಿ) ಅಲರ್ಟ್(ಎಚ್ಚರ), ಈಗಲೂ ಸಹ ಏನೇ ಆದರೂ ಅಲರ್ಟ್. ಆ ಸಮಯದಲ್ಲಿ ಹೇಳಬೇಡಿ ಬಾಪ್‌ದಾದಾ ಈಗ ನೀವು ಬನ್ನಿ, ಈಗಲೂ ಜೊತೆಯನ್ನು ನಿಭಾಯಿಸಿ, ಈಗ ಸ್ವಲ್ಪ ಶಕ್ತಿಯನ್ನು ಕೊಡಿ ಎಂದು ಕೇಳಿದರೆ ಆ ಸಮಯದಲ್ಲಿ ಕೊಡುವುದಿಲ್ಲ. ಈಗ ಎಷ್ಟು ಶಕ್ತಿ ಬೇಕೋ, ಯಾವ ರೀತಿಯಲ್ಲಿ ಬೇಕೋ ಅಷ್ಟೂ ಜಮಾ ಮಾಡಿಕೊಂಡು ಬಿಡಿ. ಎಲ್ಲರಿಗೂ ಜಮಾ ಮಾಡಿಕೊಳ್ಳಲು ಅನುಮತಿ ಇದೆ. ತೆರೆದ ಭಂಡಾರವಾಗಿದೆ. ಎಷ್ಟು ಶಕ್ತಿ ಬೇಕೋ, ಯಾವ ಶಕ್ತಿ ಬೇಕೋ ತೆಗೆದುಕೊಂಡು ಬಿಡಿ. ಪರೀಕ್ಷೆಯ ಸಮಯದಲ್ಲಿ ಶಿಕ್ಷಕರು ಅಥವಾ ಪ್ರಿನ್ಸಿಪಲ್ ಸಹಾಯ ಮಾಡುವುದಿಲ್ಲ.

ಡಬಲ್ ವಿದೇಶಿ ಮಕ್ಕಳನ್ನು ನೋಡಿ ತಂದೆಯೂ ಸಹ ಡಬಲ್ ಖುಷಿ ಪಡುತ್ತಾರೆ. ಏಕೆ? ಏಕೆಂದರೆ ಡಬಲ್ ವಿದೇಶಿಯರಿಗೆ ಸ್ವಯಂ ಅನ್ನು ಪರಿವರ್ತನೆ ಮಾಡಿಕೊಳ್ಳುವುದರಲ್ಲಿ ಡಬಲ್ ಪರಿಶ್ರಮ ಪಡಬೇಕಾಗುತ್ತದೆ. ಆದ್ದರಿಂದ ಬಾಪ್‌ದಾದಾರವರು ಡಬಲ್ ವಿದೇಶಿ ಮಕ್ಕಳನ್ನು ನೋಡಿದಾಗ ಡಬಲ್ ಖುಷಿ ಪಡುತ್ತಾರೆ. ವಾಹ್ ನನ್ನ ಡಬಲ್ ವಿದೇಶಿ ಮಕ್ಕಳೇ ವಾಹ್! ಡಬಲ್ ವಿದೇಶಿಯರು ಕೈ ಎತ್ತಿ. (ವಿಶ್ವದ ಅನೇಕ ದೇಶಗಳಿಂದ ಸುಮಾರು ಒಂದು ಸಾವಿರ ಸಹೋದರ ಸಹೋದರಿಯರು ಸಭೆಯಲ್ಲಿ ಉಪಸ್ಥಿತರಿದ್ದರು) ವಾಹ್ ಬಹಳ ಒಳ್ಳೆಯದು ಡಬಲ್ ಚಪ್ಪಾಳೆಯನ್ನು ಹೊಡೆಯಿರಿ. ಬಾಪ್‌ದಾದಾರವರು ವಿದೇಶದ ಸೇವೆಯ ಸಮಾಚಾರವನ್ನು ಕೇಳುತ್ತಿರುತ್ತಾರೆ. ನೋಡುತ್ತಲೂ ಇರುತ್ತಾರೆ. ಫಲಿತಾಂಶದಲ್ಲಿ ಸೇವೆಯ ಉತ್ಸಾಹ-ಉಲ್ಲಾಸ ಬಹಳ ಚೆನ್ನಾಗಿದೆ. ಕೇವಲ ಕೆಲವೊಮ್ಮೆ ತಮ್ಮ ಮೇಲೆ ಸೇವೆಯ ಹೊರೆಯನ್ನು ತೆಗೆದುಕೊಂಡು ಬಿಡುತ್ತೀರಿ ಹೊರೆಯನ್ನು ಎತ್ತಬೇಡಿ. ಹೊರೆಯನ್ನು ತಂದೆಗೆ ಕೊಟ್ಟುಬಿಡಿ. ತಂದೆಗಾಗಿ ಆ ಹೊರೆ ಏನೂಅಲ್ಲ ಆದರೆ ನೀವು ಸೇವೆಯ ಹೊರೆಯನ್ನು ಎತ್ತಿಕೊಂಡರೆ ಸುಸ್ತಾಗಿ ಬಿಡುತ್ತೀರಿ. ಸೇವೆಯನ್ನು ಬಹಳ ಚೆನ್ನಾಗಿ ಮಾಡುತ್ತೀರಿ. ಸೇವೆಯ ಸಮಯದಲ್ಲಿ ದಣಿಯುವುದಿಲ್ಲ. ಆ ಸಮಯದಲ್ಲಿ ಬಹಳ ಒಳ್ಳೆಯ ಚಹರೆಯ ಫೋಟೋ ತೆಗೆಯುವಂತಹದಾಗಿರುತ್ತದೆ ಆದರೆ ಕೆಲ-ಕೆಲವರು (ಎಲ್ಲರೂ ಅಲ್ಲ) ಸೇವೆಯ ನಂತರ ಸ್ವಲ್ಪ ದಣಿದಿರುವುದು ಚಹರೆಯಲ್ಲಿ ಕಾಣಿಸುತ್ತದೆ. ತಂದೆಯು ಹೇಳುತ್ತಾರೆ ಹೊರೆಯನ್ನು ಏಕೆ ಎತ್ತುತ್ತೀರಿ? ಹೊರೆಯನ್ನು ಎತ್ತುವುದು ಇಷ್ಟವಾಗುತ್ತದೆಯೇ ಅಥವಾ ಅಭ್ಯಾಸವಾಗಿ ಬಿಟ್ಟಿದೆಯೇ? ಹೊರೆಯನ್ನು ಎತ್ತಬೇಡಿರಿ. ಯಾವಾಗ ತಂದೆ ಜೊತೆಯಲ್ಲಿ ಇರುವುದಿಲ್ಲವೋ ಆಗ ಹೊರೆ ಎನಿಸುತ್ತದೆ. ನಾನು ಮಾಡಿದೆ. ನಾನು ಮಾಡುತ್ತೇನೆ. ನಾನು ಮಾಡುತ್ತೇನೆ ಎಂದಾಗ ಹೊರೆಯಾಗಿ ಬಿಡುತ್ತದೆ.

ತಂದೆ ಜೊತೆಯಲ್ಲಿದ್ದಾರೆ, ತಂದೆಯ ಕಾರ್ಯವಾಗಿದೆ, ತಂದೆ ಮಾಡಿಸುತ್ತಿದ್ದಾರೆ ಎಂದಾಗ ಹೊರೆ ಎನಿಸುವುದಿಲ್ಲ. ಹಗುರವಾಗಿ ಕುಣಿಯುತ್ತಾ ಇರುವಿರಿ. ಹೇಗೆ ಡಾನ್ಸ್( ನೃತ್ಯ) ಬಹಳ ಚೆನ್ನಾಗಿ ಮಾಡುತ್ತೀರಿ ಅಲ್ಲವೇ. ಡಬಲ್ ವಿದೇಶಿಯರ ನೃತ್ಯವು ನೋಡಲು ಬಹಳ ಚೆನ್ನಾಗಿರುತ್ತದೆ. ತಮ್ಮನ್ನು ಸುಸ್ತು ಮಾಡಿಕೊಳ್ಳುವುದಿಲ್ಲ. ಫರಿಶ್ತೆಯಂತೆ ಮಾಡುತ್ತೀರಿ. ಭಾರತದವರು ಮಾಡುವ ಡಾನ್ಸ್ ಕಾಲನ್ನು ದಣಿಸುತ್ತದೆ, ಕೈಯನ್ನು ದಣಿಸುತ್ತದೆ. ಆದರೆ ವಿದೇಶಿಯರು ಡಾನ್ಸ್ ಸಹ ಲೈಟ್(ಹಗುರವಾಗಿ) ಮಾಡುತ್ತೀರಿ. ಅಂದಮೇಲೆ ಈ ಸೇವೆಯನ್ನು ಸಹ ಒಂದು ಡ್ಯಾನ್ಸ್ ಎಂದು ತಿಳಿದುಕೊಳ್ಳಿ. ಆಟ ಎಂದು ತಿಳಿದುಕೊಳ್ಳಿರಿ. ಸುಸ್ತಾಗಬೇಡಿ. ಬಾಪ್‌ದಾದಾರವರಿಗೆ ಆ ಫೋಟೋ ಇಷ್ಟವಾಗುವುದಿಲ್ಲ. ಸೇವೆಯ ಉತ್ಸಾಹ-ಉಲ್ಲಾಸ ಚೆನ್ನಾಗಿದೆ ಹಾಗೂ ಇದರ ಫಲಿತಾಂಶವು ಸಹ ತಂದೆಯ ಬಳಿ ಇದೆ. ಈಗ ಚಿಕ್ಕ ವಿಷಯಕ್ಕೆ  ಏರುಪೇರಿನಲ್ಲಿ ಬರುವ ಪರ್ಸೆಂಟೇಜ್( ಸಂಖ್ಯೆ) ಬಹಳ ಕಡಿಮೆ ಆಗಿದೆ. ಮೆಜಾರಿಟಿ (ಬಹುಮತ) ಸರಿಯಾಗಿದ್ದಾರೆ, ಬಾಕಿ ಸ್ವಲ್ಪ ಸಂಖ್ಯೆಯಲ್ಲಿ ಕೆಲವೊಮ್ಮೆ ಸ್ವಲ್ಪ ಏರುಪೇರಿನಲ್ಲಿ ಕಂಡುಬರುತ್ತಾರೆ. ಆದರೆ ಆದಿಯ ಫಲಿತಾಂಶ ಹಾಗೂ ಈಗಿನ ಫಲಿತಾಂಶದಲ್ಲಿ ಬಹಳ ಒಳ್ಳೆಯ ಅಂತರವಿದೆ. ಈ ರೀತಿ ಕಂಡು ಬರುತ್ತದೆ ಅಲ್ಲವೇ? ಈಗ ಕೋಮಲತೆಯನ್ನು ಬಿಡುತ್ತಾ ಹೋಗುತ್ತಿದ್ದೀರಿ. ಬಾಪ್‌ದಾದಾರವರಿಗೆ ಫಲಿತಾಂಶವನ್ನು ನೋಡಿ ಖುಷಿಯಿದೆ.

ಈಗ ಚಿಕ್ಕ ಚಿಕ್ಕ ಮೈಕ್ ಸಹ ತಯಾರು ಮಾಡುತ್ತಿರುವಿರಿ. ಈಗ ಚಿಕ್ಕ ಮೈಕ್‌ಗಳಾಗಿದ್ದಾರೆ. ಆದರೆ ಚಿಕ್ಕವರಿಂದ ದೊಡ್ಡವರವರೆಗೂ ಬರುತ್ತಾ ಹೋಗುತ್ತಾರೆ. ಬಾಪ್ ದಾದಾರವರಿಗೆ ನೆನಪಿದೆ- ಆದಿಯಲ್ಲಿ ಈ ವಿದೇಶದ ಶಿಕ್ಷಕಿಯರು ಹೇಳುತ್ತಿದ್ದರು- ವಿ.ಐ.ಪಿ ಜನರನ್ನು ಭೇಟಿಯಾಗುವುದೇ ಬಹಳ ಕಷ್ಟವಾಗಿದೆ. ಬರುವುದಂತೂ ಬಿಡಿ, ಭೇಟಿಯಾಗುವುದು ಸಹ ಕಠಿಣವಾಗಿದೆ. ಹಾಗೂ ಈಗ ಸಹಜವಾಗಿ ಬಿಟ್ಟಿದೆ ಏಕೆಂದರೆ ನೀವು ಸಹ ವಿ.ವಿ.ವಿ.ಐ.ಪಿ ಆಗಿ ಹೋಗಿದ್ದೀರಿ ಎಂದಮೇಲೆ ನಿಮ್ಮ ಮುಂದೆ ವಿ.ಐ.ಪಿ ಏನಾಗಿದ್ದಾರೆ? ಒಟ್ಟಾರೆ ವಿದೇಶಿಯರ ಫಲಿತಾಂಶ ಚೆನ್ನಾಗಿದೆ. ಸೆಂಟರ್‌ಗಳಲ್ಲಿ (ಸೇವ ಕೇಂದ್ರ) ಸಹ ಚೆನ್ನಾಗಿವೆ. ವೃದ್ಧಿಯನ್ನು ಪ್ರಾಪ್ತಿ ಮಾಡುತ್ತಾ ಹೋಗುತ್ತಿದ್ದೀರಿ. ಭಾರತದಲ್ಲಿ ಹ್ಯಾಂಡ್ಸ್ (ಮಾಡುವ ಕೈಗಳು) ಇಲ್ಲ. ಇಲ್ಲವಾದರೆ ಭಾರತದಲ್ಲಿಯೂ ಸಹ ಸೇವಾಕೇಂದ್ರಗಳಂತೂ ಬಹಳ ತೆರೆಯಬಹುದಾಗಿದೆ. ಒಂದೊಂದು ಜೋನಿನವರು ಹೇಳುತ್ತಾರೆ ಹ್ಯಾಂಡ್ಸ್( ಸೇವೆ ಮಾಡುವವರು) ಇಲ್ಲ ಎಂದು. ಅಂದಮೇಲೆ ಈ ವರ್ಷ ಹ್ಯಾಂಡ್ಸ್ ತಯಾರು ಮಾಡುವ ಸೇವೆ ಮಾಡಿ. ಹ್ಯಾಂಡ್ಸ್ ಕೇಳಬೇಡಿರಿ, ತಯಾರು  ಮಾಡಿರಿ. ಇನ್ನಷ್ಟು ದಾನ ಪುಣ್ಯ ಮಾಡಿ.

ವಿದೇಶದಲ್ಲಿ ಇದು ಬಹಳ ಒಳ್ಳೆಯ ವಿಧಿಯಾಗಿದೆ- ಎಲ್ಲಯೇ ಸೇವಾಕೇಂದ್ರ ತೆರೆದರೆ ಅಲ್ಲಿರುವವರೇ ಲೌಕಿಕ ಕಾರ್ಯವನ್ನೂ ಮಾಡುತ್ತಾರೆ ಹಾಗೂ ಸೇವಾಕೇಂದ್ರವನ್ನು ನಡೆಸುತ್ತಾರೆ. ಹೇಗೆ ನಡೆಯುವುದು, ಯಾರು ನಡೆಸುತ್ತಾರೆ ಈ ತೊಂದರೆಗಳು ಕಡಿಮೆ ಇದೆ. ನೀವು ಈ ರೀತಿ ಯೋಚಿಸಬೇಡಿ- ನಾವು ಲೌಕಿಕ ಕೆಲಸಗಳನ್ನು ಏಕೆ ಮಾಡಬೇಕು! ಇದಂತೂ ನಿಮ್ಮ ಸೇವೆಯ ಸಾಧನವಾಗಿದೆ. ಲೌಕಿಕ ಕಾರ್ಯವನ್ನು ಮಾಡುತ್ತಿಲ್ಲ ಆದರೆ ಅಲೌಕಿಕ ಕಾರ್ಯದ ನಿಮಿತ್ತ ಆಗುವುದಕ್ಕಾಗಿ ಲೌಕಿಕ ಕಾರ್ಯವನ್ನು ಮಾಡುತ್ತಿರುವಿರಿ ಎಲ್ಲಿ ಹೋದರೂ ಅಲ್ಲಿ ಸೇವಾ ಕೇಂದ್ರವನ್ನು ತೆರೆಯುವ ಉಲ್ಲಾಸವಿರುತ್ತದೆಯಲ್ಲವೇ?  ಅಂದಮೇಲೆ ಲೌಕಿಕ ಕಾರ್ಯವನ್ನು ಎಲ್ಲಿಯವರೆಗೆ ಮಾಡುವುದು ಈ ರೀತಿ ಯೋಚಿಸಬೇಡಿ ಲೌಕಿಕ ಕಾರ್ಯ ಅಲೌಕಿಕ ಕಾರ್ಯದ ನಿಮಿತ್ತವಾಗಿ ಮಾಡುತ್ತೀರಿ ಎಂದ ಮೇಲೆ ನೀವು ಸಮರ್ಪಿತರಾಗಿದ್ದೀರಿ. ಲೌಕಿಕತನ

ಇರದಿರಲಿ, ಅಲೌಕಿಕತನ ಇದ್ದರೆ ಲೌಕಿಕ ಕಾರ್ಯದಲ್ಲಿಯೂ ಸಹ ಸಮರ್ಪಿತರಾಗಿದ್ದೀರಿ. ಲೌಕಿಕ ಕಾರ್ಯವನ್ನು ಬಿಟ್ಟು ಸಮರ್ಪಣಾ ಸಮಾರೋಹವನ್ನು ಆಚರಿಸಬೇಕು ಎಂಬ ಮಾತು ಇಲ್ಲ. ಹೀಗೆ ಮಾಡುವುದರಿಂದ ವೃದ್ಧಿ ಹೇಗೆ ಆಗುವುದು! ಹಾಗಾಗಿ ಲೌಕಿಕ ಕಾರ್ಯ ಮಾಡುತ್ತಾ ಅಲೌಕಿಕ ಕಾರ್ಯದ ನಿಮಿತ್ತರಾಗಿದ್ದೀರಿ. ಅಂದಮೇಲೆ ಯಾವುದನ್ನು ನಿಮಿತ್ತ ಲೌಕಿಕ ಎಂದುಕೊಳ್ಳುತ್ತೀರಿ. ಹಾಗೂ ಅಲೌಕಿಕತೆಯಲ್ಲಿರುತ್ತೀರಿ, ಅಂತಹ ಆತ್ಮರಿಗೆ ಡಬಲ್ ಅಲ್ಲ, ಪದಮದಷ್ಟು ಶುಭಾಶಯಗಳು. ಆದ್ದರಿಂದ ದಾದಿ ನಮ್ಮನ್ನು ಈ ಲೌಕಿಕದಿಂದ ಬಿಡಿಸಿರಿ, ಬಿಡಿಸಿರಿ! ಎಂದು ಹೇಳಬೇಡಿರಿ. ಹಾಗಲ್ಲ, ಇನ್ನೂ ಡಬಲ್ ಪ್ರಾಪ್ತಿ ತಯಾರು ಮಾಡಿಕೊಳ್ಳುತ್ತಿದ್ದೀರಿ. ಒಂದು ವೇಳೆ ಅವಶ್ಯಕತೆ ಇದ್ದರೆ ಅವರೇ ಬಿಡಿಸುತ್ತಾರೆ, ನಿಮಗೇನು?  ದಾದಿಯರಿಗೆ ಜವಾಬ್ದಾರಿ ಇದೆ. ನೀವು ನಿಮ್ಮ ಲೌಕಿಕದಲ್ಲಿ ಅಲೌಕಿಕತೆಯನ್ನು ತನ್ನಿರಿ. ಸುಸ್ತಾಗಬೇಡಿರಿ. ಲೌಕಿಕ ಕಾರ್ಯ ಮಾಡುತ್ತಲೂ ಏನು ಮಾಡಬೇಕು, ಸುಸ್ತಾಗುತ್ತಿದ್ದೇವೆ, ಎನ್ನುತ್ತಿದ್ದೀರಿ. ಖುಷಿಯಿಂದ ಎರಡನ್ನು ಬ್ಯಾಲೆನ್ಸ್ ಮಾಡಿರಿ. ಏಕೆಂದರೆ ಡಬಲ್ ಕಾರ್ಯ ಮಾಡುವ ಶಕ್ತಿ ತಂದೆಗೆ ವಿದೇಶಿಯರಲ್ಲಿ ಕಾಣಿಸುತ್ತಿದೆ. ಆದ್ದರಿಂದ ನಿಮ್ಮ ಶಕ್ತಿಯನ್ನು ಕಾರ್ಯದಲ್ಲಿ ಉಪಯೋಗಿಸಿರಿ. ಯಾವಾಗ ಬಿಟ್ಟುಬಿಡುತ್ತೇವೆ? ಏನಾಗುತ್ತದೆ. ಎಂದು ಯೋಚಿಸಬೇಡಿರಿ. ಇಲ್ಲಿ ತಂದೆ ಮತ್ತು ದಾದಿಯರು ಯಾರಾದರೆ ನಿಮಿತ್ತರಾದವರಿದ್ದಾರೆಯೋ ಅವರ ಮೇಲೆ ಬಿಟ್ಟುಬಿಡಬೇಡಿರಿ. ನೀವು ಯೋಚಿಸಬೇಡಿರಿ. ಲೌಕಿಕ ಕಾರ್ಯ ಮಾಡುತ್ತಲೂ ಸೇವಾಕೇಂದ್ರ ಸಂಭಾಳಿಸುವವರು ಯಾರಿದ್ದಾರೆಯೋ ಕೈಯನ್ನೆತ್ತಿರಿ. ಬಹಳ ಚೆನ್ನಾಗಿದೆ, ದಿನವಿಡೀ ಸೇವೆ ಮಾಡುವವರಿಗೆ ಯಾವ ನಂಬರ್ ಲಭಿಸುತ್ತದೆಯೋ ನಿಮಗೆ ಕೂಡ ಅದೇ ನಂಬರ್ ಲಭಿಸುತ್ತದೆ. ಆದ್ದರಿಂದ ಕೇವಲ ನಿಮಿತ್ತ ಮಾತ್ರವಾಗಿ ಮಾಡಿರಿ. ನನ್ನತನದಲ್ಲಿ ಬರಬಾರದು. ನಾನು ಇಷ್ಟು ಕೆಲಸವನ್ನು ಮಾಡುತ್ತೇನೆ ಎಂಬ ನನ್ನತನ ಇರಬಾರದು. ಮಾಡಿ ಮಾಡಿಸುವವರು ಮಾಡಿಸುತ್ತಿದ್ದಾರೆ. ನಾನು ಇನ್ಸ್ಟ್ರುಮೆಂಟ್( ಉಪಕರಣ) ಆಗಿದ್ದೇನೆ ಶಕ್ತಿಯ ಆಧಾರದ ಮೇಲೆ ನಡೆಯುತ್ತಿದ್ದೇನೆ. ಒಳ್ಳೆಯದು.

ಇಂದು ಡಬಲ್ ವಿದೇಶಿಯರ ಟರ್ನ್ ಆಗಿದೆ. ನಿಮಗೂ ಸಹ ಡಬಲ್ ವಿದೇಶಿಯರನ್ನು ನೋಡಿ ಖುಷಿಯಾಗುತ್ತದೆ ಅಲ್ಲವೇ! ಎಲ್ಲಾ ಡಬಲ್ ವಿದೇಶಿಯರು ಹರ್ಷಿತವಾಗಿದ್ದೀರಾ? ಕೈಯಿಂದ ಚಪ್ಪಾಳೆ ಹೊಡೆಯಿರಿ. ಈಗ ಮಧುಬನದಲ್ಲಂತೂ ಮಾಯೆ ಬರುವುದಿಲ್ಲ?

ಒಳ್ಳೆಯದು- ಒಂದು ಸೆಕೆಂಡಿನಲ್ಲಿ ತಂದೆಯ ಸಮಾನ ಅಶರೀರಿಯಾಗಲು ಸಾಧ್ಯವೇ? ಒಂದು ಸೆಕೆಂಡಿನಲ್ಲಿ ಪೂರ್ಣ ವಿರಾಮ ಹಾಕಿರಿ ಹಾಗೂ ಅಶರೀರಿ ಸ್ಥಿತಿಯಲ್ಲಿ ಸ್ಥಿತರಾಗಿ. (ಬಾಪ್‌ದಾದಾರವರು ಮೂರು ನಿಮಿಷಗಳ ಕಾಲ ಡ್ರಿಲ್ ಮಾಡಿಸಿದರು) ಒಳ್ಳೆಯದು. ಇಡೀ ದಿನದಲ್ಲಿ ಮತ್ತೆ ಮತ್ತೆ ಈ ಅಭ್ಯಾಸವನ್ನು ಮಾಡುತ್ತಾ ಇರಿ.

**ನಾಲ್ಕಾರು ಕಡೆಯ ಸರ್ವ ಮಾಯಾಜೀತ್, ಪ್ರಕೃತಿಜೀತ್, ಸಾಕ್ಷಿತನದ ಸಿಂಹಾಸನಾಧೀಶ, ಜೊತೆಗಾರನ ಜೊತೆಯ ಸದಾ ಅನುಭವ ಮಾಡುವವರು, ಸದಾ ದೃಢತೆಯಿಂದ ಸಫಲತೆಯನ್ನು ಕೊರಳಿನ ಹಾರವನ್ನಾಗಿ ಮಾಡಿಕೊಳ್ಳುವವರು, ಸದಾ ತಂದೆಯ ಸಮಾನ ಲೈಟ್ ಆಗಿರುವವರು, ಸದಾ ತಮ್ಮ ಶಕ್ತಿಯ ಮೂಲಕ ವಿಶ್ವವನ್ನು ದುಃಖ, ಅಶಾಂತಿಯ ಬಲಹೀನತೆಯಿಂದ ಬಿಡಿಸುವವರು ಇಂತಹ ಮಾಸ್ಟರ್ ಸುಖದ ಸಾಗರ, ಖುಷಿಯಸಾಗರ, ಪ್ರೀತಿಯ ಸಾಗರ, ಜ್ಞಾನದ ಸಾಗರ ತಂದೆಯ ಸಮಾನ ಮಕ್ಕಳಿಗೆ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 23-02-1997.

***ಜೊತೆಗಾರನನ್ನು ಜೊತೆಯಲ್ಲಿ ಇಟ್ಟುಕೊಂಡು ಸಾಕ್ಷಿ ಹಾಗೂ ಖುಷಿಯ ಸಿಂಹಾಸನಾಧಿಕಾರಿಯಾಗಿರಿ.***

ವರ್ತಮಾನ ಸಮಯದಲ್ಲಿ ಇಡೀ ವಿಶ್ವಕ್ಕೆ ತಂದೆಯ ಮಕ್ಕಳಾದ ನಿಮ್ಮ ಈ ಸೇವೆಯ ಅವಶ್ಯಕತೆ ಇದೆ- ನಿಮ್ಮ ಮುಖದಿಂದ, ನಯನಗಳಿಂದ, ನಿಮ್ಮ ಎರಡು ಮಾತುಗಳಿಂದ, ಪ್ರತಿಯೊಂದು ಆತ್ಮನ ದುಃಖವನ್ನು ದೂರ ಮಾಡಿ ಖುಷಿಯನ್ನು ಕೊಟ್ಟುಬಿಡಿ. ಯಾರೇ ಎಷ್ಟೇ ಅಲೆದಾಡುತ್ತಾ ಇರುವಂತಹವರು, ತೊಂದರೆಯಲ್ಲಿ ಇರುವಂತಹವರು, ದುಃಖದ ಅಲೆಯಲ್ಲಿ ಇರುವಂತಹವರು, ಖುಷಿಯಾಗಿರುವುದು ಅಸಂಭವ ಎಂದುಕೊಳ್ಳುವವರಾದರೂ, ನಿಮ್ಮ ಮುಂದೆ ಬರುತ್ತಲೇ ನಿಮ್ಮ ಮೂರ್ತಿ, ನಿಮ್ಮ ವೃತ್ತಿ, ನಿಮ್ಮ ದೃಷ್ಟಿ ಆ ಆತ್ಮನನ್ನು ಪರಿವರ್ತನೆ ಮಾಡಿಬಿಡಬೇಕು. ಆದ್ದರಿಂದ ಸದಾ ಖುಷಿಯಾದ ಚಹರೆ ಅಥವಾ ಸಂತೋಷದ ಮೂರ್ತಿಯಾಗಿರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಖುಷಿಯಿಂದ ಇದ್ದೇನೆ.

2. ನನ್ನ ಮುಖದಿಂದ, ನಯನಗಳಿಂದ, ಎರಡು ಮಾತುಗಳಿಂದ ಪ್ರತಿಯೊಂದು ಆತ್ಮನನ್ನು ದುಃಖದಿಂದ ದೂರ ಮಾಡಿ ಖುಷಿಯನ್ನು ಕೊಡುವ ಮಾಸ್ಟರ್ ಸುಖಸಾಗರನು.

3. ನಾನು ಯಾರು ಎಷ್ಟು ಅಲೆದಾಡುತ್ತಾ, ತೊಂದರೆಯಲ್ಲಿ, ದುಃಖದ ಅಲೆಯಲ್ಲಿರುವಂತಹ, ಖುಷಿಯಾಗಿರುವುದು ಅಸಂಭವ ಎಂದುಕೊಳ್ಳುವವರು ನನ್ನ ಎದುರಿಗೆ ಬಂದರೂ ನನ್ನ ಮೂರ್ತಿ, ವೃತ್ತಿ, ದೃಷ್ಟಿ ಆ ಆತ್ಮನನ್ನು ಪರಿವರ್ತನೆ ಮಾಡಿವೆ.

4. ನಾನು ಸತ್ಯವಾದ ಸಾಧನೆಯಿಂದ ಅಯ್ಯೋ ಅಯ್ಯೋ ಎನ್ನುತ್ತಾ ಬಂದಿರುವವರನ್ನು ವಾಹ್ ವಾಹ್ ಪರಮಾತ್ಮನ ಅದ್ಭುತ ವಾಹ್ ಎನ್ನುವಂತೆ ಸೇವೆ ಮಾಡಿದ್ದೇನೆ.

5. ನನ್ನ ಮುಖ ಮತ್ತು ನಡವಳಿಕೆಯಿಂದ ಇತರರಿಗೆ ಸಂತೋಷವನ್ನು ಅನುಭವ ಮಾಡಿಸಿದ್ದೇನೆ.

6. ನಾನು ಅದೃಷ್ಟವಂತನು.

7. ನಾನು ಮಾಯೆಯನ್ನು ದಾಸಿಯನ್ನಾಗಿ ಮಾಡಿಕೊಳ್ಳುವ ಮಾಸ್ಟರ್ ಮಾಯಾಪತಿ.

8. ನಾನು ಹೇಗಾದರೆ ತಂದೆಯ ಜ್ಞಾನವನ್ನು ವಿಸ್ತಾರವಾಗಿ ತಿಳಿದುಕೊಂಡಿದ್ದೇನೆಯೋ ಅದೇ ರೀತಿ ಮಾಯೆಯ ಬಹುರೂಪಗಳನ್ನು ಗ್ರಹಿಸುವ ಜ್ಞಾನವನ್ನು ಕೂಡ ಅರಿತುಕೊಂಡಿದ್ದೇನೆ.

9. ನನ್ನ ಮನಸ್ಸಿನ ಸ್ಥಿತಿಯಿಂದ, ಇತರ ಆತ್ಮರಿಂದ, ಪ್ರಕೃತಿಯಿಂದ, ವಾಯುಮಂಡಲದಿಂದ ಆದರೂ, ಏನಾದರೂ ಆಗಲಿ ನಾನು ಮಾತ್ರ ಖುಷಿಯನ್ನು ಬಿಡುವುದಿಲ್ಲ ಎಂಬ ಲಕ್ಷ್ಯ ಧಾರಿಯಾಗಿದ್ದೇನೆ.

10. ನಾನು ದೃಢಸಂಕಲ್ಪದಿಂದ ಸಾಕ್ಷಿ ಸ್ಥಿತಿ ಎಂಬ ಆಸನದ ಮೇಲಿದ್ದು ವಿಷಯಗಳನ್ನು ಆಟವಾಗಿ ನೋಡುತ್ತಾ ಸದಾ ಖುಷಿಯಿಂದ ಇದ್ದೇನೆ.

11. ನಾನು ಸಾಥಿಯಾದ ತಂದೆಯನ್ನು ಜೊತೆಯಲ್ಲಿಟ್ಟುಕೊಂಡು ಸಾಕ್ಷಿ ಸ್ಥಿತಿಯ ಸೀಟ್‌ಅನ್ನು ಬಲಶಾಲಿಯನ್ನಾಗಿ ಮಾಡಿಕೊಂಡಿದ್ದೇನೆ.

12. ನಾನು ಸ್ವರಾಜ್ಯಾಧಿಕಾರಿಯಿಂದ ವಿಶ್ವ ರಾಜಾಧಿಕಾರಿಯಾಗಿದ್ದೇನೆ.

13. ನಾನು ಸಾಕ್ಷಿ ಸ್ಥಿತಿ ಮತ್ತು ಖುಷಿಯ ಸಿಂಹಾಸನಾಧಿಕಾರಿಯಾಗಿ ಇರಬೇಕೆಂಬ ಒಂದೇ ಪುರುಷಾರ್ಥವನ್ನು ಮಾಡುತ್ತಿದ್ದೇನೆ.

14. ನಾನು ಸದಾ ಸಿಂಹಾಸನಾಧಿಕಾರಿ ಆಗಿದ್ದೇನೆ.

15. ನಾನು ಪ್ರತಿಯೊಂದು ಕಾರ್ಯವನ್ನು ಮಾಡುತ್ತಲೂ, ನಡೆದಾಡುತ್ತಾ, ಅಡ್ಡಾಡುತ್ತಾ, ಸಂಬಂಧ ಸಂಪರ್ಕಗಳಲ್ಲಿ ಬರುತ್ತಲೂ, ನಿದ್ರಿಸುತ್ತಲೂ ಕೂಡ ಸಾಕ್ಷಿ ಸ್ಥಿತಿಯ ಸಿಂಹಾಸನಾಧಿಕಾರಿಯಾಗಿದ್ದೇನೆ.

16. ನಾನು ಸಮಸ್ಯೆಗಳಲ್ಲಿ ಏರುಪೇರನ್ನು ಸಮಾಪ್ತಿ ಮಾಡಿ, ಸಾಕ್ಷಿ ಸ್ಥಿತಿಯಲ್ಲಿ ಸಮಸ್ಯೆ ಸಿಂಹಾಸನದ ಕೆಳಗಡೆ ಇದೆ ಮತ್ತು ನಾನು ಸಿಂಹಾಸನಾಧಿಕಾರಿಯಾಗಿ ಮೇಲೆ ಇದ್ದೇನೆ .

17. ನಾನು ಸದಾಕಾಲದ ಸಿಂಹಾಸನಾಧಿಕಾರಿಯಾಗುವ ಸಂಸ್ಕಾರವನ್ನು ಇಲ್ಲೇ ತುಂಬಿಕೊಳ್ಳುತ್ತಿದ್ದೇನೆ.

18. ನಾನು ನಾಲ್ಕೂ ಸಬ್ಜೆಕ್ಟ್ ಗಳಲ್ಲಿ ಅಲರ್ಟ್ ಆಗಿ ಇದ್ದೇನೆ. (ಜ್ಞಾನ, ಯೋಗ, ಧಾರಣೆ, ಸೇವೆ.)

19. ನಾನು ಪರೀಕ್ಷೆಗೆ ಮೊದಲೇ ಎಷ್ಟು ಶಕ್ತಿ ಬೇಕೋ, ಯಾವ ಶಕ್ತಿ ಬೇಕೋ ಆ ಶಕ್ತಿಯನ್ನು ಜಮಾ ಮಾಡಿಕೊಳ್ಳುವ ಸಮರ್ಥ ಸ್ವರೂಪ.

20. ನಾನು ಪ್ರತಿಯೊಂದು ಸೇವೆಯಲ್ಲಿ ತಂದೆ ಮಾಡಿಸುತ್ತಿದ್ದಾರೆ ನಾನು ಮಾಡುತ್ತಿದ್ದೇನೆ ಎಂಬ ಸಂಕಲ್ಪದಿಂದ ಸದಾ ಹಗುರವಾಗಿ ಇದ್ದೇನೆ.

21. ನಾನು ಅಲೌಕಿಕ ಕಾರ್ಯಕ್ಕೆ ನಿಮಿತ್ತವಾಗಲು ಲೌಕಿಕ ಕಾರ್ಯವನ್ನು ಮಾಡುತ್ತಿದ್ದೇನೆ ಎಂದು ಭಾವಿಸಿ ಡಬಲ್ ಪ್ರಾಪ್ತಿಯನ್ನು ತಯಾರು ಮಾಡಿಕೊಂಡಿದ್ದೇನೆ.

22. ನಾನು "ಮಾಡಿ ಮಾಡಿಸುವವರು ಮಾಡಿಸುತ್ತಿದ್ದಾರೆ ನಾನು ಒಂದು ಉಪಕರಣ (ಇನ್ಸ್ಟ್ರುಮೆಂಟ್) ಪವರ್ ನ (ತಂದೆಯ ಶಕ್ತಿ) ಆಧಾರವಾಗಿ ನಡೆಯುತ್ತಿದ್ದೇನೆ" ಎಂಬ ಸ್ಮೃತಿ ಸ್ವರೂಪ.

23. ನಾನು ಒಂದು ಕ್ಷಣದಲ್ಲಿ ತಂದೆಯ ಸಮಾನವಾದ  ಆಶರೀರಿ ಸ್ಥಿತಿಯಲ್ಲಿ ಇರುವ ಅಭ್ಯಾಸವನ್ನು ದಿನವಿಡೀ ಮತ್ತೆ ಮತ್ತೆ ಮಾಡುತ್ತಿದ್ದೇನೆ.